**ಕರ್ನಾಟಕ ಸರ್ಕಾರ**

**ಸಂಖ್ಯೆ : ಆಕುಕ 113 ಅಮುಕಾ 2020**

**ಕರ್ನಾಟಕ ಸರ್ಕಾರದ ಸಚಿವಾಲಯ,**
**ವಿಕಾಸಸೌಧ,**
**ಬೆಂಗಳೂರು, ದಿನಾಂಕ: 17–04–2020**

## ಸುತ್ತೋಲೆ

ರಾಜ್ಯದಲ್ಲಿ ಕೊರೊನಾ ವೈರಸ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನಲೆಯಲ್ಲಿ, ಐ.ಸಿ.ಎಂ.ಆರ್. ಶಿಫಾರಸ್ಸುಗಳ ಪ್ರಕಾರ, ಅಧಿಕ ಅಪಾಯವಿರುವ ಜನರಿಗೆ ಪ್ರತಿಬಂಧಕ ಔಷಧಿಯಾಗಿ ಹೈಡ್ರೋಕ್ಸಿಕ್ಲೋರೋಕ್ವಿನ್ (Hydroxychloroquine) ನೀಡಬಹುದಾಗಿದೆ.

ಈ ಕೆಳಕಂಡ ವರ್ಗದವರಿಗೆ ಹೈಡ್ರೋಕ್ಸಿಕ್ಲೋರೋಕ್ವಿನ್ (HCQ) ಮಾತ್ರೆಗಳನ್ನು ಆದ್ಯತೆಯ ಮೇರೆಗೆ ನೀಡಬೇಕಾದ ಅಗತ್ಯವಿದೆ.

1. ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುವ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಸಿಬ್ಬಂದಿ ವರ್ಗದವರಿಗೆ.
2. ಕೋವಿಡ್–19 ತಪಾಸಣೆಗಾಗೆ ಮನೆ–ಮನೆಗಳಿಗೆ ಭೇಟಿ ನೀಡುತ್ತಿರುವಮ ಕಣ್ಗಾವಲು ತಂಡಗಳಲ್ಲಿ ಕೆಲಸ ಮಾಡುತ್ತಿರುವ ಇಲಾಖಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು.
3. ಕೋವಿಡ್–19 ದೃಢಪಟ್ಟ ವ್ಯಕ್ತಿಗಳೊಂದಿಗೆ ಸಂಪರ್ಕ ಹೊಂದಿರುವವರಿಗೆ.
4. ರೋಗನಿರೋಧಕ ಕ್ರಮವಾಗಿ ನಿಯಂತ್ರಿತ ವಲಯದಲ್ಲಿ (Containment Zone) ಕೆಲಸ ಮಾಡುವವರಿಗೆ.
5. ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುವ ಎಲ್ಲಾ ಅಧಿಕಾರಿಗಳಿಗೆ.
6. ವೈದ್ಯಕೀಯ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ವೈದ್ಯಕೀಯ ಕಾಲೇಜುಗಳಲ್ಲಿ ಕೋವಿಡ್–19 ಸಂಬಂಧ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರು.
7. ಆಂಬ್ಯುಲೆನ್ಸ್ ವಾಹನಗಳಲ್ಲಿ ಕೋವಿಡ್–19 ಸಂಬಂಧ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರು.
8. ಪೊಲೀಸ್ ಇಲಾಖೆ ಹಾಗೂ ಇತರೆ ಯಾವುದೇ ಇಲಾಖೆಯಿಂದ ಕೋವಿಡ್–19 ಸಂಬಂಧ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರು.
9. ಕೋವಿಡ್–19 ಸಂಬಂಧ ಕೆಲಸ ನಿರ್ವಹಿಸುತ್ತಿರುವ ಖಾಸಗಿ ವೈದ್ಯಕೀಯ ವೃಂದ.

**ಹಿರಿಯ ನಾಗರೀಕರು, ಈ ಹಿಂದೆಯೇ ಹೃದ್ರೋಗ ಸಮಸ್ಯೆಗಳಿಂದ ಬಳಲುತ್ತಿರುವವರು, ಜಿ6ಪಿಡಿ ಕೊರತೆ ಹೊಂದಿರುರವವರು** ಮತ್ತು **4–ಅಮಿನೋಕ್ವಿನೋಲೋನ್ಸ್ ಇದಕ್ಕೆ ಅತಿಸಂವೇದಿಯಾಗಿರುವ** (Hypersensitivity) ವ್ಯಕ್ತಿಗಳು ಮತ್ತು ಇತರೆ ದೀರ್ಘಕಾಲಿಕ ಖಾಯಿಲೆಗಳಿಂದ ಬಳಲುತ್ತಿರುವ ವ್ಯಕ್ತಿಗಳು ವೈದ್ಯಕೀಯ ತಪಾಸಣೆ ಹಾಗೂ ತಜ್ಞರ ಸೂಕ್ತ ಸಲಹೆಯೊಂದಿಗೆ ಹೈಡ್ರೋಕ್ಸಿಕ್ಲೋರೋಕ್ವಿನ್ (Hydroxychloroquine-HCQ) ಮಾತ್ರೆಗಳನ್ನು ಪ್ರತಿಬಂಧಕ (Prophylaxis) ಔಷಧಿಯಾಗ ಪಡೆಯಬಹುದಾಗಿದೆ. 15 ವರ್ಷಕ್ಕಿಂತ ಕೆಳಗಿನ ವಯಸ್ಸಿನ ಮಕ್ಕಳಿಗೆ ಈ ಔಷಧಿಯನ್ನು ಶಿಫಾರಸ್ಸು ಮಾಡಬಾರದು.

ಹೈಡ್ರೋಕ್ಸಿಕ್ಲೋರೋಕ್ವಿನ್ (HCQ) ಮಾತ್ರೆ ಔಷಧಿಯ ಪ್ರಮಾಣ ಮತ್ತು ಚಿಕಿತ್ಸೆಯ ಅವಧಿಯನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

| ಅರ್ಹ ವ್ಯಕ್ತಿಗಳು | ಹೈಡ್ರೋಕ್ಸಿಕ್ಲೋರೋಕ್ವಿನ್ ಮಾತ್ರೆ ಮತ್ತು ಪ್ರಮಾಣ (ಡೋಸೇಜ್) |
|---|---|
| ಕೋವಿಡ್-19 ಶಂಕಿತ ಅಥವಾ ಖಚಿತಪಟ್ಟ ಪ್ರಕರಣಗಳ ಸೇವೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ರೋಗಲಕ್ಷಣ ಇಲ್ಲದೇ ಇರುವ ಆರೋಗ್ಯ ಸೇವಾ ಸಿಬ್ಬಂದಿ ಮತ್ತು ಕೋವಿಡ್-19 ನಿಯಂತ್ರಿತ ವಲಯದಲ್ಲಿ ಕಾರ್ಯನಿರ್ವಹಿಸುವವರು. | ಮೊದಲನೇ ದಿನ : 400 mg ದಿನಕ್ಕೆ ಎರಡು ಬಾರಿ<br>ಮುಂದಿನ 7 ವಾರಗಳು: 400 mg ವಾರಕ್ಕೆ ಒಂದು ಬಾರಿ<br>ಆಹಾರದೊಡನೆ ಸೇವನೆ |
| ಮನೆಗಳಲ್ಲಿ ಇರುವ ಪ್ರಯೋಗಾಲಯದಿಂದ ಖಚಿತಪಟ್ಟ ಕೋವಿಡ್-19 ಪ್ರಕರಣಗಳ ಸಂಪರ್ಕ ಹೊಂದಿದ ರೋಗಲಕ್ಷಣ ಇಲ್ಲದವರು. | ಮೊದಲದಿನ : 400 mg ದಿನಕ್ಕೆ ಎರಡು ಬಾರಿ<br>ಮುಂದಿನ 3 ವಾರಗಳು: 400 mg ವಾರಕ್ಕೆ ಒಂದು ಬಾರಿ ಆಹಾರದೊಡನೆ ಸೇವನೆ |

**ಅಪರ ಮುಖ್ಯ ಕಾರ್ಯದರ್ಶಿಗಳು,**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.**

ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು.

ಪ್ರತಿ:

1) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.

2) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.